ಕಂದಾಯ ಇಲಾಖೆಯಲ್ಲಿ ಗಣಕಯಂತ್ರದ ಅಳವಡಿಕೆ.

2025(2558)

ಶ್ರೀ ಬಸವಂತ ಮೋತಕಪಲ್ಲಿ(ಸೇಡಂ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಕಂದಾಯ ಇಲಾಖೆಯ ತಹಶೀಲ್ದಾರ್ ಕಾರ್ಯಾಲಯದಲ್ಲಿ ಗಣಕಯಂತ್ರದಿಂದ ರೈತರಿಗೆ ಪಹಣಿ ವ್ಯವಸ್ಥೆಯಾಗಿರುವುದು ನಿಜವಲ್ಲವೇ; ಯಾವ ಯಾವ ತಾಲ್ಲೂಕುಗಳಲ್ಲಿ ಗಣಕಯಂತ್ರ ಅಳವಡಿಸಲಾಗಿದೆ?

2. ಕೇವಲ ತಾಲ್ಲೂಕು ಕೇಂದ್ರದಲ್ಲಿಯೇ ಗಣಕಯಂತ್ರವನ್ನು ಅಳವಡಿಸಿದರೆ ನೂರಾರು ಜನರ ಒತ್ತಡದಿಂದ ಅಥವಾ ವಿದ್ಯುಚ್ಛಕ್ತಿ ಕಡಿತದಿಂದ ದಾಖಲಾತಿಗಳು ಕೊಡಲು ವಿಳಂಬವಾಗುವುದನ್ನು ತಪ್ಪಿಸಲು ಪ್ರತಿ ಗ್ರಾಮ ಲೆಕ್ಕಪಾಲಕರ ಕೇಂದ್ರ ಸ್ಥಾನದಲ್ಲಿ ಸಹ ಗಣಕಯಂತ್ರವನ್ನು ಅಳವಡಿಸುವುದು ಸರ್ಕಾರದ ಯೋಜನೆಯಲ್ಲಿದೆಯೇ?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):

1. ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಗಣಕಯಂತ್ರಗಳನ್ನು ಅಳವಡಿಸಲಾಗಿದ್ದು, ತಹಶೀಲ್ದಾರರ ಕಾರ್ಯಾಲಯದ ಗಣಕಯಂತ್ರದಿಂದ ರೈತರಿಗೆ ಪಹಣಿ ವ್ಯವಸ್ಥೆಯಾಗಿರುವುದು ನಿಜ. ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಗಣಕಯಂತ್ರಗಳನ್ನು ಅಳವಡಿಸಲಾಗಿದೆ.

2. ತಾಲ್ಲೂಕು ಕೇಂದ್ರಗಳಲ್ಲಿನ ಗಣಕಯಂತ್ರದಿಂದ ದಾಖಲಾತಿಗಾಗಿ ಜನರ ಒತ್ತಡ ತಪ್ಪಿಸುವುದಕ್ಕಾಗಿ ಹೋಬಳಿ ಮಟ್ಟದಲ್ಲಿಯೂ ಈ ಉದ್ದೇಶಕ್ಕಾಗಿ ಗಣಕಯಂತ್ರಗಳನ್ನು ಅಳವಡಿಸುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

ವಸತಿ ಯೋಜನೆಯಡಿ ಫಲಾನುಭವಿಗಳಿಗೆ ನೀಡುವ ಸಾಲದ ಠೇವಣಿ.

2026(2233)

ಶ್ರೀ ಬಸವರಾಜು ಹೆಚ್.ಸಿ(ಹಿರಿಯಾಪಟ್ಟಣ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. 2000-2001ನೇ ಸಾಲಿನ ರಾಜೀವ್ ಗಾಂಧಿ ವಸತಿ ಯೋಜನೆಯಡಿಯಲ್ಲಿ ಆಶ್ರಯ, ಅಂಬೇಡ್ಕರ್ ಯೋಜನೆಗಳಡಿಯಲ್ಲಿ ಫಲಾನುಭವಿಗಳಿಗೆ ನೀಡುತ್ತಿರುವ ಸಾಲದ ಹಣವನ್ನು

ಪಡೆಯಲು ಬ್ಯಾಂಕ್‌ನಲ್ಲಿ ರೂ.500 ಠೇವಣಿ ಇಡಬೇಕಾದ ನಿಯಮ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ. ಬಂದಿದ್ದಲ್ಲಿ, ಕೇವಲ ಕಡಿಮೆ ಮೊತ್ತದ ಸಾಲ ಪಡೆಯುವ ನಿರ್ಗತಿಕರಿಗೆ ಈ ಮೊತ್ತದ ಠೇವಣಿ ಇಡಬೇಕೆಂಬ ನಿಯಮ ಸರಿಯೆ?

ಇ. ಇದಕ್ಕೆ ಬದಲಿಯಾಗಿ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಲು ಸರ್ಕಾರ ಯೋಚಿಸುವುದೇ?

ಶ್ರೀ ಖಿಮರುಲ್ ಇಸ್ಲಾಂ (ವಸತಿ ಸಚಿವರು):

ಅ. ಹೌದು.

ಆ. ಹೌದು, ಬ್ಯಾಂಕ್ ನಿಯಮಾವಳಿ ಪ್ರಕಾರ ಕನಿಷ್ಠ ಠೇವಣಿ ಇಡಬೇಕೆಂಬ ನಿಯಮವಿದೆ.

ಇ. ಕಳೆದ ವರ್ಷ ಈ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿದೆ.

ರಾಜೀವಗಾಂಧಿ ವಸತಿ ಯೋಜನೆಯಡಿಯಲ್ಲಿ ನೀಡುವ ಅನುದಾನ.

2027(2234)

ಶ್ರೀ ಬಸವರಾಜು ಹೆಚ್.ಸಿ.(ಪಿರಿಯಾಪಟ್ಟಣ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜೀವ್ ಗಾಂಧಿ ವಸತಿ ಯೋಜನೆಯಡಿಯಲ್ಲಿ ನಿರ್ಗತಿಕರಾದವರಿಗೆ ನೀಡುತ್ತಿರುವ ಅನುದಾನದಲ್ಲಿ ಗ್ರಾಮಾಂತರ ಪ್ರದೇಶದ ಫಲಾನುಭವಿಗಳಿಗೆ ಹಾಗೂ ನಗರ ಪ್ರದೇಶದ ಫಲಾನುಭವಿಗಳಿಗೆ ನೀಡುವ ಸಹಾಯಧನದ ಮೊತ್ತವೆಷ್ಟು;

ಆ. ಸದರಿ ಸಹಾಯಧನವು ನಗರಕ್ಕೆ ಹಾಗೂ ಗ್ರಾಮಾಂತರಕ್ಕೆ ವ್ಯತ್ಯಾಸವಿದ್ದಲ್ಲಿ ಇದಕ್ಕೆ ಕಾರಣಗಳೇನು; ಇದು ತಾರತಮ್ಯ ನೀತಿಯಲ್ಲವೆ;

ಇ. ನಗರ ಪ್ರದೇಶದ ಈ ಸೌಲಭ್ಯವನ್ನು ಗ್ರಾಮೀಣ ಪ್ರದೇಶಕ್ಕೆ ಅನ್ವಯಿಸಲು ಪರಿಗಣಿಸಲಾಗುವುದೆ?

ಶ್ರೀ ಖಿಮರುಲ್ ಇಸ್ಲಾಂ (ವಸತಿ ಸಚಿವರು):